ದಿನ ಕುರಿಗಳ್ನ ಮೇಯ್ಸಿಕೊಂಡು ಹ್ಯಾಪ್ ಮುಖಾ ಮಾಡ್ಕೊಂಡು ಬರ್ತಿರ ಬೇಕಾದ್ರೆ ಊರ ಹೊರಗಿನ ಆಲದ ಕಟ್ಟೇ ಮ್ಯಾಕೆ ಕುಂತಿದ್ದ ಪಟೇಲ್ರು 'ಯಾಕ್ಲಾ ಕೆಂಚಾ ಬೋ.. ಬ್ಯಾಸ್ರಾ ಮಾಡ್ಕೊಂಡಂಗೆ ಕಾಣ್ತೆಯಲ್ಲ ಯಾಕೆ ಏನು ವಿಷ್ಯ?' ಅಂತ ಕೇಳ್ದಾಗ ಇನ್ನೇನು ಧಣಿ ದ್ಯಾವ್ರು ರಟ್ಯಾಗ್ ಸಾಕಷ್ಟು ದುಡಿಯೋ ಶಕ್ತಿ ಕೊಟ್ಟಾವ್ನೆ... ಆದ್ರೂ ಬದಕ್ನಾಗೆ ಹ್ಯಾಗ್ ಮುಂದೆ ಬರೋದು ಅಂತ ಚಿಂತಿಸ್ತೀವ್ನಿ ಅಂದನಂತೆ. ಮುಂದುವರೆದ ಪಟೇಲ್ರು 'ಅದ್ಯಾಕ್ಲಾ ಹಂಗ ಅಂತೀ... ನಾ ಹೇಳ್ದಾಂಗೆ ಒಸಿ ದಿನ ಕಷ್ಟ ಪಟ್ಟು ಕೆಲ್ಸಾ ಮಾಡಿದ್ರೆ ಬರೀ ನಮ್ಮೂರಿಗಲ್ಲಾ ಸುತ್ತಾ ಮುತ್ಲಿನ್ ಊರಿಗೂ ಹೆಸ್ರು ವಾಸಿ ಆಗ್ತೀ...' ಅಂತ ಹೇಳ್ದಾಗ ನಮ್ಮ ತಾತ 'ಸುಮ್ಕಿರಿ ಬುದ್ಧೀ ತಮಾಸೀ ಮಾಡ್ಬೇಡಿ, ನೆಟ್ಟಗೆ ನನಗೆ ಎರಡು ಅಕ್ಷರಾ ಓದಾಕ್ ಬರಲ್ಲಾ ಬರೀಯಾಕ್ ಬರಲ್ಲ' ಅಂತ ಉತ್ತರಿಸಿದ ಮ್ಯಾಕೆ ಪಟೇಲ್ರು– 'ಏ ದಡ್ಡಾ... ನಾನ್ಯಾಕ್ಲಾ ತಮಾಸಿ ಮಾಡ್ಲೀ... ನಾಳೆಯಿಂದಾನೇ ಈ ಊರಿನ ದಕ್ಷಿಣ ದಿಕ್ಕನಾಗೆ ಖಾಲೀ ಬಿದ್ದರೋ ಪಾಳ ಜಾಗ್ದಾಗೆ ಒಂದಿಪ್ಪತ್ತು ಅಡಿ ಅಂತರಾ ಬಿಟ್ಟು ಗುಣಿ ತಗ್ದು, ನನ್ನ ತಾವ ಇರೋ ಬ್ಯಾರೆ ಬ್ಯಾರೆ ಜಾತಿ ಗಿಡಗೋಳ್ ಸಸಿ ನಡ್ತಾ ಬಾ... ಅಂಗೆ ಅವುಗಳಿಗೆ ನೀರು ಉಣಿಸಿ ಒಣಗ್ದಾಂಗೆ ನೋಡ್ಕೊ... ಸಸೀ ಮೊದಲ್ಗೊಂಡು ಎಲ್ಲಾ ಸಾಮಗ್ರಿಗಳನ್ನು ನಾನು ಒದಗಸ್ತೀನಿ, ಜೊತೆಗೆ ನನ್ನ ಹಳೆ ಸೈಕಲ್ ಐತೇ ಅದ್ನೂ ತಕ್ಕೊಂಡು ಹೋಗು, ನಿನಗೆ ಊಟಾ ತಿಂಡಿ ಕೊಟ್ಟು ಕೂಲೀನೂ ಕೊಡ್ತೀನಿ' ಎಂದು ಹೇಳಿದಾಗ ನಮ್ಮ ತಾತ ಬಲು ಖುಷಿ ಪಟ್ಕೊಂಡು ಒಪ್ಪಿ ಮಾರ್ನೆ ದಿನದಿಂದಲೇ ಅವ್ರು ಪಟೇಲ್ರು ತೋರಿಸಿದ್ದ ಜಾಗದಾಗೆ ಅವರು ಕೊಟ್ಟ ಎಲ್ಲಾ ಉಪಕರಣ ಬಳಸಿ, ಬಿಸಿಲು ಮಳೆ ಗಾಳಿ ಲೆಕ್ಕಸ್ದೇ ದಿನಕ್ಕೆ ಐವತ್ತು ಸಸಿ ಹಾಂಗೆ ಎರಡು ವರ್ಷ ನಡ್ತಾ ಬಂದ್ರಂತೆ, ಮೂರನೇ ವರ್ಷ ಶುರು ಆಗ್ತಿದ್ದಂಗೆ ಎಲ್ಲಾ ಗಿಡಗಳೂ ಮಜಬೂತಾಗಿ ಬೆಳ್ದು ನಿಂತಾಗ ಪಟೇಲ್ರಿಗೆ ಆಶ್ಚರ್ಯ ಆಗಿ ಅದನ್ನು ಸರಕಾದ ಗಮನಕ್ಕೂ ತಂದು, ಅಲ್ಲಲ್ಲಿ ರಸ್ತೆ ಮಾಡ್ಸಿ ಅವರೇನಾ ಒಂದು ಶಿವನ ದೇವಸ್ಥಾನ ಕಟ್ಸಿದ್ರಂತೆ. ಅದಾಗಿ ಒಂದು ಇಪ್ಪತ್ತು ವರ್ಷಾ ಆದಮ್ಯಾಕೆ ಇಲ್ಲಿ ದೊಡ್ಡ ಹಸರು ಗುಡ್ಡಾನೇ ನಿರ್ಮಾಣ ಆದಂಗಾತು. ಖಾಲಿ ಇದ್ದ ಈ ಜಾಗ್ದಾಗೇ ಕಷ್ಟ ಪಟ್ಟು ಗುಡ್ಡಾ ಬೆಳೆಸಿದ್ದು ನಮ್ಮ ತಾತ ಅಂತ ಗೊತ್ತಾದ ಮೇಲೆ ಸರ್ಕಾರದೋರು ಇದಕ್ಕೆ 'ಕೆಂಚನ ಗುಡ್ಡ' ಅಂತ ಹೆಸರಿಟ್ರು. ಇಷ್ಟೇ ಅಲ್ಲ ಅವರಿಗೆ 'ಪರಿಸರ ಶ್ರೀ' ಅನ್ನೊ ಪದಕಾ ಕೊಟ್ಟು ಸನ್ಮಾನಾನೂ ಮಾಡಿದ್ರು. ಅಂಥಾ ನಮ್ಮ ತಾತಾ ಹೋದ ವರ್ಷ ನಮ್ಮನ್ನು ಬಿಟ್ಟು ಹೋದ್ರು. ಅವ್ರು ಹೋಗ್ತಾ ಹೋಗ್ತಾ ತಮ್ಮ ಹೆಸರು ಎಲ್ಲಾರ ಬಾಯಲ್ಲಿ ಬರೋ ಹಾಂಗೆ ಮಾಡೊದ್ರು...'' ಎಂದು ಹೇಳಿ ಮುಗಿಸಿದ.

ಆಗ ಮಕ್ಕಳೆಲ್ಲ ಒಕ್ಕೊರಲಿನಿಂದ 'ಅಬ್ಬಾ....' ಎಂದು ಉದ್ಗಾರ ತೆಗೆದರು.ಆ ನಂತರ ಗುರುಗಳು 'ನೋಡಿದ್ರಾ ಮಕ್ಕಳಾ ಕೆಂಚಪ್ಪ ಓದು ಬರಹ ಕಲೀದಿದ್ರೂ ಎಂಥಾ ಅಜರಾಮರವಾಗಿ ಕೆಲಸಾ ಮಾಡಿದ ಅಲ್ವಾ? ಎಂದರು. ನಂತರ ಮಕ್ಕಳು ಊಟ ಪೂರೈಸಿ ಮನೆಗೆ ವಾಪಸ್ ಹೋಗುವಾಗ ಅವರ ಬಾಯಲ್ಲಿ ಕೆಂಚಪ್ಪನದೇ ಮಾತು ಬರತೊಡಗಿತ್ತು.

# ಎರಡು ಪದ್ಯಗಳು

■ ಸ. ರಘುನಾಥ

## ಕಥೆ ಕಟ್ಟಿ

ಮೂಡಿದೆಲ್ಲ ಚುಕ್ಕಿ
ಬೆಳದಿಂಗಳ ಕೀರು ನೆಕ್ಕಿ
ಹೊಟ್ಟೆ ತುಂಬಿ ಸೊಕ್ಕಿ
ಭೂಮಿಯತ್ತ ನೋಡಿ
ನಕ್ಕು ನಗೆಯ ಚೆಲ್ಲಿ
ಹೇಳಿದವು ಮಕ್ಕಳೆ
ಅಂಗಳಕ್ಕೆ ಬನ್ನಿ
ಅಮ್ಮನಿಂದ ಮೊಸರು ಅನ್ನ
ಕೈತುತ್ತು ತಿನ್ನಿ
ಜೂಟಾಟ ಆಡಿ
ಚಂದಮಾಮಗೆ ಟಾಟಾ ಹೇಳಿ
ಮಲಗಿ ನಿದ್ದೆ ಮಾಡಿ
ಇದನೆ ಕಥೆಯ ಕಟ್ಟಿ
ಗೆಳೆಯರಿಗೆಲ್ಲ ಹೇಳಿ.


ಶಶಿಧರ ಹಳೇಮನಿ

## ಚಲ್ ಕಬಡ್ಡಿ

ಚಲ್
ಕಬಡ್ಡಿ ಕಬಡ್ಡಿ ಕಬಡ್ಡಿ
ಲೇ
ಹಿಡಕೋ ಎಳಕೋ ಮಾಡೋ ಔಟು.

ಚಲ್
ಕಬಡ್ಡಿ ಕಬಡ್ಡಿ ಕಬಡ್ಡಿ
ಲೇ
ನುಗ್ಗೋ ಎಳಕೊಂಡ್ ಬಾರೊ

ಕಬಡ್ಡಿ ಕಬಡ್ಡಿ
ಕಬಡ್ಡಿ
ಕ....ಬ....ಡ್ಡಿ

ಗೆಲ್ಲೋದಿಕ್ಕೆ ಸಿಳ್ಳು ಚಪ್ಪಾಳೆ
ಗೆಲ್ಲಿಸೋದಿಕ್ಕೆ ಕೂಗು ಚಪ್ಪಾಳೆ

ಗೆದ್ದರು
ಚಲ್
ಕಬಡ್ಡಿ ಕಬಡ್ಡಿ ಕಬಡ್ಡಿ

ಸೋತರು
ಚಲ್
ಕಬಡ್ಡಿ ಕಬಡ್ಡಿ ಕಬಡ್ಡಿ